ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು-560 003**

**ಸಂಖ್ಯೆ : ಕಶಾಪ&ಮೌ.ನಿ.ಮಂ/ಪೂ.ಪ.ಕೇಂ.ನಿ/2022-23** **ದಿನಾಂಕ:08/08/2023**

**-:ಸು ತ್ತೋ ಲೆ:-**

**ವಿಷಯ:ಆಗಸ್ಟ್-ಸೆಪ್ಟೆಂಬರ್ 2023 ರ ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆ-2 ರ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವ ಬಗ್ಗೆ.**

ಉಲ್ಲೇಖ: ಈ ಕಛೇರಿಯ ಸುತ್ತೋಲೆ ದಿನಾಂಕ:28/07/2023 ರಂತೆ.

---

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ-2 ಅನ್ನು ಆಗಸ್ಟ್-ಸೆಪ್ಟೆಂಬರ್ 2023 ಮಾಹೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ವತಿಯಿಂದ ನಡೆಸಲಾಗುತ್ತಿದ್ದು, ಈ ಸಂಬಂಧ ಈಗಾಗಲೇ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವ ಸಂಬಂಧ ಮೊದಲನೇ ಪೂರಕ ಪರೀಕ್ಷೆಗೆ ನಿಗದಿಪಡಿಸಲಾದ 304 ಪರೀಕ್ಷಾ ಕೇಂದ್ರಗಳನ್ನು **ಪೂರಕ ಪರೀಕ್ಷೆ-2ಕ್ಕೂ ಮುಂದುವರೆಸಲಾಗಿದೆ.** ಈ ಸಂಬಂಧ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು (ಪದವಿ ಪೂರ್ವ) ಇವರ ಇಮೇಲ್ ವಿಳಾಸಕ್ಕೆ ರವಾನಿಸಲಾಗಿದೆ. ಯಾವುದಾದರೂ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ, ಹೆಚ್ಚುವರಿ ಪರೀಕ್ಷಾ ಕೇಂದ್ರಗಳ ಮಂಜೂರಾತಿಗೆ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಇ-ಮೇಲ್ ಮೂಲಕ ತಮಗೆ ಕಳುಹಿಸಿರುವ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಪ್ರಿಂಟ್ ತೆಗೆದು ಪರಿಶೀಲಿಸಿ ಹೊಸ ಕೇಂದ್ರಗಳನ್ನು ಯಾವುದೇ ಕಾರಣಕ್ಕೂ ಸೇರ್ಪಡೆ ಮಾಡಲು ಅವಕಾಶ ನೀಡದೆ, ಒಂದು ವೇಳೆ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಬೇಕಾಗಿದ್ದಲ್ಲಿ ರದ್ದುಪಡಿಸಿ ತಮ್ಮ ದೃಢೀಕರಣದೊಂದಿಗೆ **ದಿನಾಂಕ:09-08-2023 ರಂದು ಮಧ್ಯಾಹ್ನ 2-00 ಗಂಟೆಯೊಳಗೆ** ಉಪನಿರ್ದೇಶಕರು, (ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು-3 ಇವರ ಇಮೇಲ್: **jd exam.kseab@gmail.com** ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.

8/8/23

ನಿರ್ದೇಶಕರು (ಪರೀಕ್ಷೆ)
ಕ.ಶಾ.ಪ.ಮ.ಮೌ.ನಿ.ಮಂಡಲಿ
ಮಲ್ಲೇಶ್ವರಂ, ಬೆಂಗಳೂರು.

ಇವರಿಗೆ:-

1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
2. ಸಹಾಯಕ ನಿರ್ದೇಶಕರು, ಗಣಕ ಶಾಖೆ ಕ.ಶಾ.ಪ.ಮ.ಮೌ.ನಿ.ಮಂಡಲಿ, ಮಲ್ಲೇಶ್ವರಂ, ಇವರಿಗೆ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.

ಪ್ರತಿಯನ್ನು:-

1. ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ರವರಿಗೆ ಗೌರವಪೂರ್ವಕ ಮಾಹಿತಿಗಾಗಿ.